**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 1212/2023**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಕೆ ವಿವೇಕ ಆನಂದನ್ ಮತ್ತು ಇತರರು

**-ಃದೋಷಾರೋಪಣೆಃ-**

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ವಿವೇಕ ಆನಂದನ್ ಕೆ ಬಿನ್ ಕುಮಾರ, 21 ವರ್ಷ, ವಾಸಃ173/2 ದ ಮಾದಕೋಯಿಲ್ ಸ್ಟ್ರೀಟ್, ತಮೀಳುನಾಡು , ಚಿನ್ನೈ, ತಮೀಳುನಾಡು ರಾಜ್ಯ.
2. ರಾಗುಲ್ ಬಿನ್ ಮೀರಸಾ, 23 ವರ್ಷ, ವಾಸಃ216 ಸಿಂಗರ್ ವೇಲ್ 2 ನೇ ಲೈನ್ ರೋಯಾಪರಂ, 6 ನೇ ನ್ಯೂ ಕಾಲೋನಿ, ಆವಣಿ ಚಿನ್ನೈ.
3. ಅಭ್ದುಲ್ ರೆಹಮಾನ್ ಬಿನ್ ಮೀರಸಾ, 19 ವರ್ಷ, ವಾಸಃ216 ಸಿಂಗರ್ ವೇಲ್, 2 ನೇ ಲೈನ್ ರೋಯಾಪರಂ ಚಿನ್ನೈ , ಹಾಲಿ ವಾಸಃ ಡೋರ್ ನಂ.96 ನ್ಯೂ ಕಾಲೋನಿ, ಆವಣಿ ಚಿನ್ನೈ.
4. ದರ್ಶನ್ ಕುಮಾರ್ ಬಿನ್ ವೆಂಕಟೇಶ, 22 ವರ್ಷ, ವಾಸಃಗಂಟೆ ಕಣಿವೆ, ತರೀಕೆರೆ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ22.04.2019 ರಂದು ಬೆಳಿಗ್ಗೆ 9-20 ರ ಸಮಯದಲ್ಲಿ ತರೀಕೆರೆಯ ಶಾಂತಿ ಸಾಗರ್ ಹೋಟೆಲ್ ಮುಂಭಾಗ 1 ರಿಂದ 3 ನೇ ಆರೋಪಿತರಾದ ನೀವುಗಳು 1. TN 07 BQ-3585 YAMAHA R-15 (2) TN-02-BL-8419, (3) TN-09-CB-5154 ರ ಬೈಕ್ ಗಳನ್ನು ಕಳುವು ಮಾಡಿದ್ದು, ಆ ಮೂಲಕ ನೀವು ಆ ಮೂಲಕ ನೀವು ಭಾರತೀಯ ದಂಡ

ಸಂಹಿತೆಯ ಕಲಂ.**379** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 1 ರಿಂದ 3 ನೇ ಆರೋಪಿತರಾದ ನೀವುಗಳು ಕಳುವು ಮಾಡಿದ್ದ ಬೈಕ್ ಗಳು ಎಂದು ತಿಳಿದಿದ್ದರೂ ಸಹ 4 ನೇ ಆರೋಪಿಯಾದ ನೀವು ಸದರಿ ಬೈಕ್ ಗಳನ್ನು ಖರೀದಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**411** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ14.07.2025

Sd/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಎ-1
ಎ-2
ಎ-3
ಎ-4

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉಃ

ಎ-1
ಎ-2
ಎ-3
ಎ-4

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)
ದಿನಾಂಕಃ14.07.2025

Sd/-
ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿ/ತರ ಸಹಿಃ